# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾರ್ಡ್ ಸಮಿತಿ ಅಧ್ಯಕ್ಷರ ಕಾರ್ಯಾಲಯ, ವಾರ್ಡ್ ಸಂಖ್ಯೆ:22-ವಿಶ್ವನಾಥನಾಗೇನಹಳ್ಳಿ, ಬಿಬಿಎಂಪಿ ಕಾಮಗಾರಿ ಇಲಾಖೆ ವಾರ್ಡ್ ಕಛೇರಿ ಕಟ್ಟಡ, ವಿಶ್ವನಾಥನಾಗೇನಹಳ್ಳಿ ಮುಖ್ಯ ರಸ್ತೆ, ಬೆಂಗಳೂರು-32

ದಿನಾಂಕ:02/01/2019.

## ಸಭೆಯ ಸೂಚನಾಪತ್ರ

ವಿಷಯ:- ವಾರ್ಡ್ ಸಮಿತಿ ಸಭೆಯ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವನಾಥನಾಗೇನಹಳ್ಳಿ ವಾರ್ಡಿನ ವಿವಿಧ ಸಮಸ್ಯೆಗಳನ್ನು ಕುರಿತು ಈ ಕೆಳಕಂಡ ವಿಷಯಗಳನ್ನು ಚರ್ಚಿಸಲು, ವಾರ್ಡ್ ಸಮಿತಿ ಅಧ್ಯಕ್ಷತೆಯಲ್ಲಿ ದಿನಾಂಕ:05/01/2019 ರಂದು ಸಮಯ ಬೆಳಗ್ಗೆ 11.30 ಕ್ಕೆ ಅಧ್ಯಕ್ಷರ ಕಾರ್ಯಾಲಾಯದಲ್ಲಿ ಸಭೆಯು ಸಮವೇಶಗೊಳ್ಳುವುದು. ಸದರಿ ಸಭೆಗೆ ಸಂಬಂಧಿಸಿದ ವಾರ್ಡಿನ ಸಮಿತಿ ಸದಸ್ಯರು ಹಾಜರಾಗಲು ಈ ಮೂಲಕ ಕೋರಲಾಗಿದೆ.

**ಅಜೆಂಡಾ:**

1)ಹಿಂದಿನ ಸಭೆಯ ನಡವಳಿಯ ಪಾಲನಾ ವರದಿಯ ಕುರಿತು.
2)ವಾರ್ಡಿನಲ್ಲಿ ಉದ್ಯಾನವನ ನಿರ್ಮಿಸುವ ಕುರಿತು.
3)ವಾರ್ಡಿನ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಬಿಡುಗಡೆ ಮಾಡುವ ಕುರಿತು.
4)ಕಸ ವಿಲೇವಾರಿ ಕಾಮಗಾರಿಗಳ ಬಗ್ಗೆ.

**ಅಧ್ಯಕ್ಷರ ಅದೇಶದ ಮೇರೆಗೆ)**

ವಾರ್ಡ್ ಸಮಿತಿ ಕಾರ್ಯದರ್ಶಿ
ಹಾಗೂ ಸಹ ಕಂದಾಯ ಅಧಿಕಾರಿ,
ಜೆ.ಸಿ.ನಗರ ಉಪ ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ರವರಿಗೆ,

--------------------------

ವಾರ್ಡ್ ಸಮಿತಿ ಸದಸ್ಯರು

**ಪ್ರತಿಯನ್ನು**

**ಅದರಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಲಾಗಿದೆ.**

1) ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಅಪ್ತ ಕಾರ್ಯಲಯಕ್ಕೆ ಸಲ್ಲಿಸಲಾಗಿದೆ.
2) ಪೂಜ್ಯ ಉಪಮಹಾಪೌರರ ಅವಗಾಹನೆಗೆ ತರಲು ಅಪ್ತ ಕಾರ್ಯಲಯಕ್ಕೆ ಸಲ್ಲಿಸಲಾಗಿದೆ.
3) ಮಾನ್ಯ ಆಯುಕ್ತರು ರವರ ಅವಗಾಹನೆಗೆ ತರಲು ಅಪ್ತ ಕಾರ್ಯಲಯಕ್ಕೆ ಸಲ್ಲಿಸಲಾಗಿದೆ.
4) ಕೌನ್ಸಿಲ್ ಕಾರ್ಯದರ್ಶಿ ರವರ ಅವಗಾಹನೆಗೆ ತರಲು ಅಪ್ತ ಕಾರ್ಯಲಯಕ್ಕೆ ಸಲ್ಲಿಸಲಾಗಿದೆ.
5) ಜಂಟಿ ಆಯುಕ್ತರು(ಪೂರ್ವ) ರವರ ಅವಗಾಹನೆಗೆ ಸಲ್ಲಿಸಲಾಗಿದೆ.

**ಅಗತ್ಯ ಮಾಹಿತಿಯೊಂದಿಗೆ ಸಭೆಗೆ ಹಾಜರಾಗಲು ಕೋರಲಾಗಿದೆ.**

ಕಂದಾಯ ಅಧಿಕಾರಿ (ಹೆಬ್ಬಾಳ)/ಸಹಾಯಕ ಕಾರ್ಯನಿರ್ವಹಕ ಅಭಿಯಂತರರು(ಜೆ.ಸಿ.ನಗರ ಉಪ ವಿಭಾಗ)/ಸಹಾಯಕ ಕಾರ್ಯನಿರ್ವಹಕ ಅಭಿಯಂತರರು(ವಿದ್ಯುತ್ ಪೂರ್ವ)/ಸಹಾಯಕ ಕಾರ್ಯನಿರ್ವಹಕ ಅಭಿಯಂತರರು(ಬೆಸ್ಕಾಂ)/ಸಹಾಯಕ ಕಾರ್ಯನಿರ್ವಹಕ ಅಭಿಯಂತರರು(ನೀರು ಸರಬರಾಜು ಮತ್ತು ಒಳಚರಂಡಿ)/ಠಾಣಾಧಿಕಾರಿ(ಹೆಬ್ಬಾಳ/ಡಿ.ಜಿ.ಹಳ್ಳಿ ಪೋಲೀಸ್ ಠಾಣೆ)/ಆರೋಗ್ಯ ವೈಧ್ಯಾಧಿಕಾರಿ (ಹೆಬ್ಬಾಳ)/ಸಹಾಯಕ ಅಧಿಕ್ಷಕರು (ತೋಟಗಾರಿಕೆ)/ಸಹಾಯಕ ಕಲ್ಯಾಣಾಧಿಕಾರಿ (ಪೂರ್ವ)/ಸ.ಕಾ.ನಿ.ಅ(ಘನತ್ಯಾಜ್ಯಾ)ಹೆಬ್ಬಾಳ ವಿಭಾಗ

**ಅಗತ್ಯಕ್ರಮ ಕೈಗೊಳ್ಳಲು ಕೋರಲಾಗಿದೆ.**

ಸಾರ್ವಜನಿಕ ಸಂಪರ್ಕಧಿಕಾರಿ ರವರ ಅವಗಾಹನೆಗೆ
ಕಛೇರಿ ಕಡತಕ್ಕೆ.

Scanned by CamScanner

## ದಿನಾಂಕ:05/01/2019 ರಂದು ಬೆಳಗ್ಗೆ 11.30 ಘಂಟೆಗೆ ವಾರ್ಡ್ ಸಂಖ್ಯೆ:22 ವಿಶ್ವನಾಥ ನಾಗೇನಹಳ್ಳಿ ವಾರ್ಡ್ ಸಂಬಂಧಿಸಿದಂತೆ ನಡೆದ ವಾರ್ಡ್ ಸಮಿತಿಯ ಸಭೆಯ ನಡವಳಿಗಳು

ಹಾಜರಿದ್ದವರು

| ಕ್ರ. ಸಂ | ಸದಸ್ಯರ ಹೆಸರು ಶ್ರೀಯುತರುಗಳಾದ: | ಪದನಾಮ | ಕ್ರ. ಸಂ. | ಅಧಿಕಾರಿ ಹೆಸರು | ಪದನಾಮ |
|---|---|---|---|---|---|
| 1 | ರಾಜಶೇಖರ್ .ಎನ್ | ಅಧ್ಯಕ್ಷರು | 1 | ಶ್ರೀ.ಶ್ರೀನಿವಾಸ ಮೂರ್ತಿ | ಸ.ಕಾ.ಅ(ವಾರ್ಡ್ 22) |
| 2 | ಶ್ರೀನಿವಾಸ.ಎಸ್. | ಕಾರ್ಯದರ್ಶಿ, ಹಾಗೂ ಸಹಾಯಕ ಕಂದಾಯ ಅಧಿಕಾರಿ (ಜೆ.ಸಿನಗರ) | 2 | ಆನಂದ್ ಪಿ.ಸಿ | ಕಿ.ಅ.(ವಿದ್ಯುತ್) |
| 3 | ರತ್ನಮ್ಮ | ಸದಸ್ಯರು | 3 | ಪ್ರವೀಣ್.ಎ.ಆರ್ | ಕೆಲಸ ಪರಿವೀಕ್ಷಕರು |
| 4 | ಆನಂದ್ | ಸದಸ್ಯರು | 4 | ಎಸ್.ಉಷಾರಾಣಿ | ಕಲಾಣ್ಯ ಇಲಾಖೆ |
| 5 | ಡೇವಿಡ್ ಫೆರ್ನಾಡಿಸ್ | ಸದಸ್ಯರು | 5 | ಮಲ್ಲೇಶ್ | ಕಂದಾಯ ಪರಿವೀಕ್ಷಕರು |
| 6 | ಡಿಲ್ಲಿಬಾಬು | ಸದಸ್ಯರು | 6 | ವಿನೋದ್ | ಕಂದಾಯ ವಸೂಲಿಗಾರರು |
| 7 | ಲಕ್ಷ್ಮಣ್‌ರೆಡ್ಡಿ | ಸದಸ್ಯರು | | | |
| 8 | ಮಹಾದೇವ್ | ಸದಸ್ಯರು | | | |
| 9 | ಜಾಕೀರ್ ಪಾಷಾ | ಸದಸ್ಯರು | | | |

ಸಮಿತಿಯು ಸಮಾವೇಶಗೊಳ್ಳುತ್ತಿದ್ದಂತೆ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಾರ್ಯದರ್ಶಿಗಳು ಸಮಿತಿಯಲ್ಲಿ ಹಾಜರಿರುವ ಸದಸ್ಯರುಗಳಿಗೆ ಹಾಗೂ ಅಧಿಕಾರಿ ವರ್ಗದವರಿಗೆ ಸ್ವಾಗತ ಕೋರಿ, ಸಮಿತಿಯಲ್ಲಿ ಕೋರಂ ಇದುದ್ದರಿಂದ ಸಮಿತಿಯ ಸಭೆಯನ್ನು ನಡೆಸುಕೊಡಲು ಮಾನ್ಯ ಅಧ್ಯಕ್ಷರನ್ನು ಕೋರಲಾಯಿತು.

1)ಹಿಂದಿನ ಸಭೆಯ ನಡವಳಿಯ ಪಾಲನಾ ವರದಿಯ ಕುರಿತು.
2)ವಾರ್ಡಿನಲ್ಲಿ ಉದ್ಯಾನವನ ನಿರ್ಮಿಸುವ ಕುರಿತು.
3)ವಾರ್ಡಿನ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಬಿಡುಗಡೆ ಮಾಡುವ ಕುರಿತು.
4)ಕಸ ವಿಲೇವಾರಿ ಕಾಮಗಾರಿಗಳ ಬಗ್ಗೆ.

ವಾರ್ಡ್ 22ರ ವಿವಿಧ ಬಡಾವಣೆಗಳಲ್ಲಿ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳು, ಶಾಲಾ ಕಾಲೇಜುಗಳು ಹಾಗೂ ವಿವಿಧ ಧರ್ಮಗಳಾದ ದೇವಸ್ಥಾನ ಮಸೀದಿ ಹಾಗೂ ಚರ್ಚುಗಳು ಇರುತ್ತದೆ. ಹೆಚ್ಚಿನ ಭಾಗದ ಸಾರ್ವಜನಿಕರಿಗೆ ಈ ಕಟ್ಟಡಗಳ ಸ್ಥಳಕ್ಕೆ ಹೋಗಲು ರಸ್ತೆಗಳಲ್ಲಿ ನಾಮಫಲಕಗಳು ಇರುವುದಿಲ್ಲ. ಸಾರ್ವಜನಿಕರು ರಸ್ತೆ ಫಲಕಗಳನ್ನು ಹಾಗೂ ಮುಖ್ಯ ರಸ್ತೆಗಳಲ್ಲಿ ದ್ವಾರಗಳನ್ನು ಆಳವಡಿಸಿ ನಿರ್ಮಿಸುವಂತೆ ಕೋರಿರುವ ಬಗ್ಗೆ. ಸದಸ್ಯರುಗಳು ಚರ್ಚಿಸಿದರು ಹಾಗೂ ಈ ಸಂಬಂದ

Scanned by CamScanner

ಸಾರ್ವಜನಿಕರು ಅನುಕೂಲಕ್ಕಾಗಿ ಮುಖ್ಯ ಹಾಗೂ ಅಡ್ಡರಸ್ತೆಗಳಲ್ಲಿ ಶಿಕ್ಷಣ ಸಂಸ್ಥೆಗಳ ಅರ್ಚುಗಳನ್ನು ಮತ್ತು ನಾಮಫಲಕಗಳನ್ನು ಅಳವಡಿಸಲು ಇದೇ ರೀತಿಯಾಗಿ ಪ್ರಮುಖ ಪ್ರಾರ್ಥನ ಸ್ಥಳಗಳನ್ನು ಸಾರ್ವಜನಿಕರು ಸುಲಭವಾಗಿ ಗುರುತಿಸಿಕೊಳ್ಳುವಂತೆ ಆಯ ಧರ್ಮದ ದೇವ ಮಂದಿರಗಳ ರಸ್ತೆ ಎರಡು ಬದೀಗಳಲ್ಲಿ ದೇವ ಮಂದಿರ ಸೂಚಿಸುವ ಆರ್ಚುಗಳನ್ನು ಮತ್ತು ನಾಮಫಲಕಗಳನ್ನು ಅಳವಡಿಸಲು ಹಾಜರಿದ್ದ, ಸರ್ವಸದಸ್ಯರುಗಳು ಒಪ್ಪಿಗೆ ನೀಡಿರುತ್ತಾರೆ.

ಸಮಿತಿಯ ಸದಸ್ಯರಾದ ಡೇವಿಡ್ ಫರ್ನಾಡಿಸ್ ರವರು ಮಾತನಾಡಿ ಕನಕನಗರ 7ನೇ ಮುಖ್ಯರಸ್ತೆಯಲ್ಲಿ ಸುಮಾರು 30 ವರ್ಷಗಳಿಂದ ಅಳವಡಿಸಿರುವ ಒಳಚಂರಡಿ ಕೊಳವೆ ಮಾರ್ಗವು ಆಗಾಗ ಕಟ್ಟಿಕೊಳ್ಳುತ್ತಿದ್ದು, ಬೆಂಗಳೂರು ಜಲಮಂಡಳಿ ವತಿಯಿಂದ ಇದನ್ನು ಸರಿಪಡಿಸಲು ಕ್ರಮವಹಿಸಲಾಗಿದ್ದು, ಪದೇಪದೇ ಇದೇ ರಸ್ತೆಗೆ ಜಲಮಂಡಳಿ ಅಧಿಕಾರಿಯನ್ನು ಕರೆಸಿ ಕೊಳವೆ ಮಾರ್ಗವನ್ನು ಸರಿಪಡಿಸಲು ಕೋರಿವ ಬದಲಾಗಿ ಹೊಸ ಒಳಚರಂಡಿ ಮಾರ್ಗವನ್ನು ಅಳವಡಿಸಲು ಸೂಕ್ತವೆಂದು ತಿಳಿಸಿರುತ್ತಾರೆ. ಇದಕ್ಕೆ ಸದಸ್ಯರು ಒಪ್ಪಿಗೆಯನ್ನು ಸೂಚಿಸಿದ್ದು, ಶೀಘ್ರವೆ ಹಳೇಯ ಒಳಚರಂಡಿ ಮಾರ್ಗವನ್ನು ಹೊಸ ಚರಂಡಿ ಮಾರ್ಗಕ್ಕೆ ಅಳವಡಿಸುವಂತೆ ಸಮಿತಿಯು ಒಪ್ಪಿಗೆ ನೀಡಿದೆ.

ಸಮಿತಿಯ ಸದಸ್ಯರಾದ ಶ್ರೀ.ಆನಂದ್ ರವರು ಮಾತನಾಡಿ ವಾರ್ಡ್ ಸಂಖ್ಯೆ:22ರಲ್ಲಿ ಸಾರ್ವಜನಿಕರು ನಡೆದಾಡಲು, ಉದ್ಯಾನವನ ಇಲ್ಲದಿರುವುದನ್ನು ಪ್ರಸ್ತಾಪಿಸಿರುತ್ತಾರೆ.

ಇದಕ್ಕೆ ಪುರಕವಾಗಿ ಡೇವಿಡ್ ಫರ್ನಾಡಿಸ್ ರವರು ಮಾತನಾಡಿ ರೈಲ್ವೆ ವ್ಯಾಪ್ತಿಯಲ್ಲಿ ಇರುವ ಸ್ಥಳವನ್ನು ಬಿಬಿಎಂಪಿ ವಶಕ್ಕೆ ಪಡೆದು ಇಲ್ಲಿ ಒಂದು ಉದ್ಯಾನವನವನ್ನು (Working track, Jum,) ನಿರ್ಮಿಸಿ ಹಸಿರು ಗಿಡಗಳನ್ನು ನೆಡಬಹುದಾಗಿರುತ್ತದೆ ಎಂದು ತಿಳಿಸಿದರು.

ಇದಕ್ಕೆ ಶ್ರೀ.ಅನಂದ್ ರವರು ವಾರ್ಡ್ ಸಂಖ್ಯೆ 22 ರಲ್ಲಿ ಸರ್ಕಾರದ ಜಾಗದ ಕೊರತೆಯ ಕಾರಣ ಉದ್ಯಾನವನವನ್ನು ವಿಶ್ವನಾಥನಾಗೇನಹಳ್ಳಿ ಮುಖ್ಯರಸ್ತೆಗೆ ಅಡ್ಡವಾಗಿ ಸಿವಿಲ್ ಬಡಾವಣೆಯ ಮೂಲಕ ಹಾದುಹೋಗುವ ದೊಡ್ಡಮಳೆ ಚರಂಡಿ ಜಾಗವು ಸೂಕ್ತವಾಗಿರುತ್ತದೆ ಎಂದು ತಿಳಿಸಿದರು.

ಪ್ರಸ್ತುತ ಘನತ್ಯಾಜ್ಯಾ ಸಂಗ್ರಹೆ ಮತ್ತು ವಿಲೇವಾರು ಮತ್ತು ಮಳೆ ನೀರು ಚರಂಡಿಯ ಸ್ಲಾಬ್‌ಗಳನ್ನು ಉಪಯೋಗಿಸಲಾಗುತ್ತಿದ್ದು, ಇದರ ಪಕ್ಕದಲ್ಲಿ ಉದ್ದ ಸುಮಾರು 100ಮೀಟರ್ ಅಗಲ ಸುಮಾರು 30 ಮೀಟರ್‌ಗಳಿದ್ದು, ದೊಡ್ಡ ಮಳೆ ನೀರು ಚರಂಡಿ ಬಿಬಿಎಂಪಿ ವತಿಯಿಂದ ಸ್ಲಾಬ್ ನಿರ್ಮಿಸಿ ಇದರ ಮೇಲೆ ಸಾರ್ವಜನಿಕರ ಅನುಕೂಲಕ್ಕಾಗಿ ಒಂದು ಉದ್ಯಾನವನ ಹಾಗೂ ಸಣ್ಣ ಗಿಡಗಳನ್ನು ನೆಟ್ಟು ಉಪಯೋಗಿಸುವ ಬಗ್ಗೆ ಎಲ್ಲಾ ಸದಸ್ಯರುಗಳೊಂದಿಗೆ ಚರ್ಚಿಸಲಾಯಿತು.

ವಾರ್ಡ್ ಸಂಖ್ಯೆ 22 ರಲ್ಲಿ 2017-18ನೇ ಸಾಲಿನ ಈ ಕೆಳಕಂಡ ಕಾಮಗಾರಿಗಳನ್ನು ಅತಿ ಶೀಘ್ರದಲ್ಲಿ ಅನುಷ್ಠಾನಗೊಳಿಸುವಂತೆ ಸದಸ್ಯರು ಎಲ್ಲರೂ ಸೂಚಿಸಿದೆ.

ಸಮಿತಿಯ ಸದಸ್ಯರಾದ ಶ್ರೀಮತಿ.ರತ್ನಮ್ಮ ರವರು ಮಾತನಾಡಿ ಪರಿಷ್ಟಜಾತಿ/ಪಂಗಡದವರು ವಾಸಿಸುವ ಬಡಾವಣೆಗಳಲ್ಲಿ ಇರುವ ದೇವಸ್ಥಾನಗಳನ್ನು ಪುನರ್‌ಜೀವನ ಮಾಡಲು ಕೋರಿರುತ್ತಾರೆ. ಹಾಗೂ ಈ ಸಂಬಂಧ ಗಂಗಾಭವನಿ ದೇವಸ್ಥಾನ ಮತ್ತು ಯಲ್ಲಮ್ಮ ದೇವಸ್ಥಾನವನ್ನು ಅಯ್ಕೆ ಮಾಡುವಂತೆ ಸೂಚಿಸುತ್ತಾರೆ. ಇದಕ್ಕೆ ಸದಸ್ಯರುಗಳ ಎಸ್.ಎಫ್.ಸಿ ಅನುದಾನದಲ್ಲಿ ಕಾಯ್ದಿರಿಸಿರುವ ಮೊತ್ತವನ್ನು ಈ ಕೆಲಸಗಳಿಗೆ ಬಳಸಲು ತಿಳಿಸಿರುತ್ತಾರೆ. ಸದರಿ ವಿಷಯಕ್ಕೆ ಹಾಜರಿದ್ದ ಸರ್ವಸದಸ್ಯರುಗಳು ಒಪ್ಪಿಗೆ ನೀಡಿರುತ್ತಾರೆ.

Scanned by CamScanner

ಅಧ್ಯಕ್ಷರ ಅಪ್ಪಣೆ ಮೇರೆಗೆ ಕಾರ್ಯದರ್ಶಿಗಳು ಸಮಿತಿಯ ಸದಸ್ಯರುಗಳಿಗೆಲ್ಲ ವಂದಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

R.N. (RAJASHEKAR. N)

ಶ್ರೀ.ಶ್ರೀನಿವಾಸ.ಎಸ್
ಕಾರ್ಯದರ್ಶಿ ಹಾಗೂ
ಸಹ ಕಂದಾಯ ಅಧಿಕಾರಿ(ಜೆ.ಸಿ.ನಗರ)

ಶ್ರೀ.ರಾಜಶೇಖರ್.ಎನ್
ಅಧ್ಯಕ್ಷರು
ವಾರ್ಡ್ 22 ರ ವಾರ್ಡ್ ಸಮಿತಿ

<u>ಪ್ರತಿಯನ್ನು:</u>

- ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
- ಮಾನ್ಯ ಉಪಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
- ಮಾನ್ಯ ಆಯುಕ್ತರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
- ಕೌನ್ಸಿಲ್ ಕಾರ್ಯದರ್ಶಿ ರವರ ಅವಗಾಹನೆಗೆ ಸಲ್ಲಿಸಲಾಗಿದೆ.
- ವಾರ್ಡ್ ಸಮಿತಿಯ ಸದಸ್ಯರುಗಳ ಅವಗಾಹನೆಗೆ ಕಳುಹಿಸಿದೆ.
- ಮಾನ್ಯ ಅಪರ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
- ಮಾನ್ಯ ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.

Scanned by CamScanner